**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 1867/2022**

**ಸಿ.ಡಬ್ಲ್ಯೂಃ 8, ಪಿ.ಡಬ್ಲ್ಯೂಃ 7**

ಸಾಕ್ಷಿದಾರರ ಹೆಸರು : ದೇವಿದಾಸ ಮೊಗೇರ
ತಂದೆಯ ಹೆಸರು : ಮಂಜು
ವಯಸ್ಸು : 62 ವರ್ಷ
ಉದ್ಯೋಗ : ನಿವೃತ್ತ ಕ್ಷೇತ್ರ ಶಿಕ್ಷಣಾಧಿಕಾರಿಗಳು ,ಭಟ್ಕಳ
ವಾಸ್ತವ್ಯ : ಸೋಡಿಗದ್ದೆ , ಭಟ್ಕಳ

**<u>ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 12/09 /2025</u>**

**<u>ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,</u>**

ದಿಃ 05.02.2022 ರಂದು ಭಟ್ಕಳ ಗ್ರಾಮೀಣ ಠಾಣೆಯಿಂದ ಚಾಸಾ 1 ರವರು ಶಾಲೆಯಲ್ಲಿ ದಿಃ 08.12.2021 ರಂದು ಕರ್ತವ್ಯದಲ್ಲಿದ್ದ ಬಗ್ಗೆ ಮಾಹಿತಿ ಕೇಳಿದ್ದು ಇರುತ್ತದೆ. ನಾನು ಗೀತಾ ನಾಯ್ಕ ಎನ್ನುವ ನಮ್ಮ ಕಚೇರಿಯ ಶಿಕ್ಷಣ ಸ0 ಯೋಜಕಿಗೆ ನೇಮಿಸಿ ಆ ಬಗ್ಗೆ ದಾಖಲಾತಿ ಪರಿಶೀಲನೆ ಮಾಡಿ ಪ್ರಮಾಣಪತ್ರವನ್ನು ನೀಡಿದ್ದು ಇರುತ್ತದೆ.

2. ಸಾಕ್ಷಿಯು ಭಟ್ಕಳ ಗ್ರಾಮೀಣ ಠಾಣೆಯಿಂದ ಬಂದ ಪತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ- 7 ಎಂದು , ಸಾಕ್ಷಿಯ ಸಹಿಯನ್ನು ನಿಪಿ- 7 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರಮಾಣಪತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ- 8 ಎಂದು , ಸಾಕ್ಷಿಯ ಸಹಿಯನ್ನು ನಿಪಿ- 8 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಚಾಸಾ 1 ರವರು ಕೆಲಸ ಮಾಡುತ್ತಿರುವ ಬಗ್ಗೆ ದಾಖಲೆ ಪಡೆದು ಗೀತಾ ನಾಯ್ಕ ರವರು ಬರೆದ ಪತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ- 9 ಎಂದು , ಸಾಕ್ಷಿಯ ಸಹಿಯನ್ನು ನಿಪಿ- 9 ಎ ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು : ಆರೋಪಿ ಪರ ಶ್ರೀ ಕೆ ಹೆಚ್ ಎನ್ ವಕೀಲರಿಂದ,</u>**

ಸದರಿ ಪ್ರಕರಣಕ್ಕೆ ಸಂಬಂಧಿಸಿ ತನಿಖಾಧಿಕಾರಿಗಳು ಬೇರೆ ಸಂಗತಿಗಳ ಬಗ್ಗೆ ಯಾವುದೇ ವಿವರಣೆ ಕೇಳಿದ್ದು ಇರುವುದಿಲ್ಲ. ಸದರಿ ಪ್ರಕರಣದ ಪಿರ್ಯಾದಿದಾರರು ಯಾರು ಎಂದು ನನಗೆ ಮಾಹಿತಿ ಇಲ್ಲ. ಸದರಿ ಪ್ರಕರಣದ ಪಿರ್ಯಾದಿದಾರರು ನನಗೆ ಈ ಪ್ರಕರಣಕ್ಕೆ ಸಂಬಂಧಿಸಿ ನನ್ನ ಬಳಿ ಯಾವುದೇ ಚರ್ಚೆ ಮಾಡಿಲ್ಲ. ಪೊಲೀಸರು ಕೇಳಿದ್ದ ಕಾರಣ ನಾನು ದಾಖಲೆಯನ್ನು ನೀಡಿದ್ದೇನೆ ಎಂದರೆ ಸರಿ.

**ಮರುವಿಚಾರಣೆ ಇಲ್ಲ.**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ.**